





**ಸುದ್ದಿ ಸಂಚಯ**

# ಮಂಗಳೂರು ರಾಮಕೃಷ್ಣ ಮಿಷನ್ನಿನ 'ಅಮೃತ ಮಹೋತ್ಸವ'

ಮಂಗಳೂರು ರಾಮಕೃಷ್ಣ ಮಿಷನ್ನಿನ ೭೫ನೇ ಅಮೃತ ಮಹೋತ್ಸವ ಕಾರ್ಯಕ್ರಮಗಳ ಅಂಗವಾಗಿ, ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಶ್ರೀಮತ್ ಸ್ವಾಮಿ ಸುಹಿತಾನಂದಜಿ ಮಹಾರಾಜರವರು ೨೦೨೫ರ ಸೆಪ್ಟೆಂಬರ್ ೧೨ರಿಂದ ೧೫ರ ವರೆಗೆ ಮಠಕ್ಕೆ ಭೇಟಿ ನೀಡಿ, ಹಲವು ಪ್ರಮುಖ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.

### ೧. 'ಪ್ರಜ್ಞಾ ೨೦೨೫' ಶೈಕ್ಷಣಿಕ ಸಮ್ಮೇಳನ ಉದ್ಘಾಟನೆ (೧೩ ಸೆಪ್ಟೆಂಬರ್ ೨೦೨೫)



ಸ್ವಾಮಿ ಸುಹಿತಾನಂದಜಿ ಮಹಾರಾಜರವರು '**ಪ್ರಜ್ಞಾ ೨೦೨೫**' ಶೈಕ್ಷಣಿಕ ಸಮ್ಮೇಳನವನ್ನು ಉದ್ಘಾಟಿಸಿದರು. ವೃತ್ತಿಪರ ವಿದ್ಯಾರ್ಥಿಗಳಿಗಾಗಿ ಮಂಗಳೂರು ರಾಮಕೃಷ್ಣ ಮಠದ ಸ್ವಾಮಿ ವಿವೇಕಾನಂದ ಸಭಾಂಗಣದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ತಮ್ಮ ಉದ್ಘಾಟನಾ ಭಾಷಣದಲ್ಲಿ ಅವರು ವಿದ್ಯಾರ್ಥಿಗಳು ಉನ್ನತ ಆದರ್ಶಗಳನ್ನು ಅಳವಡಿಸಿಕೊಳ್ಳುವಂತೆ, ಮನಶ್ಶುದ್ಧಿಯನ್ನು ಬೆಳೆಸಿಕೊಳ್ಳುವಂತೆ, ಹಾಗೂ ಸಮಾಜೋಪಯೋಗಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಿದರು.

### ೨. 'ಅಮೃತ ಭವನ' ಉದ್ಘಾಟನೆ ಹಾಗೂ 'ಅಮೃತ ವರ್ಷ' ಕಾರ್ಯಕ್ರಮಗಳ ಪ್ರಾರಂಭ (೧೪ ಸೆಪ್ಟೆಂಬರ್ ೨೦೨೫)

ಕಾರ್ಯಕ್ರಮಗಳ ಅಂತಿಮ ದಿನವಾದ ೨೦೨೫ರ ಸೆಪ್ಟೆಂಬರ್ ೧೪ ರಂದು, ಸ್ವಾಮಿ ಸುಹಿತಾನಂದಜಿ ಮಹಾರಾಜ್ ಅವರು ಹೊಸದಾಗಿ ನಿರ್ಮಿಸಲಾದ '**ಅಮೃತ ಭವನ**'ವನ್ನು ಉದ್ಘಾಟಿಸಿದರು. ಇದು ವಿವೇಕಾನಂದ ತರಬೇತಿ ಕೇಂದ್ರದ ಭಾಗವಾಗಿದ್ದು, ಬಡ ಮತ್ತು ಹಿಂದುಳಿದ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಮತ್ತು ತರಬೇತಿ ನೀಡುವ ಯೋಜನೆಯಾಗಿದೆ. ಪೂಜ್ಯ ಸ್ವಾಮೀಜಿ ಮಂಗಳೂರು ರಾಮಕೃಷ್ಣ ಮಿಷನ್ನಿನ ೭೫ನೇ ಅಮೃತ ವರ್ಷೋತ್ಸವದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

**ಆಶೀರ್ವಚನ ಭಾಷಣ :** ಸ್ವಾಮಿ ಸುಹಿತಾನಂದಜಿ ಮಹಾರಾಜ್ ಮಾತನಾಡುತ್ತ , ಶ್ರೀರಾಮಕೃಷ್ಣ ಪರಮಹಂಸರು, ಶ್ರೀಮಾತೆ ಶಾರದಾದೇವಿಯವರು ಹಾಗೂ ಸ್ವಾಮಿ ವಿವೇಕಾನಂದರು ದರಿದ್ರರ ಹಾಗೂ ದುಃಖಿತರ ಉನ್ನತಿಗಾಗಿ ತಮ್ಮ ಜೀವನವನ್ನು ಸಮರ್ಪಿಸಿದರು. ನಾವು ಕೂಡ ದೇಹ, ಮನಸ್ಸು ಹಾಗೂ ಸಂಪತ್ತನ್ನು ಸೇವಾ ಮನೋಭಾವದಿಂದ ಸಮರ್ಪಿಸಿ, ನಮ್ಮ ಜೀವನವನ್ನು ಪವಿತ್ರಗೊಳಿಸಬೇಕು, ದೈವಾನುಗ್ರಹಕ್ಕೆ ಪಾತ್ರರಾಗಬೇಕು ಎಂದರು. ಈ ಸಂದರ್ಭದಲ್ಲಿ ಅವರು ಮಂಗಳೂರು ರಾಮಕೃಷ್ಣ ಮಿಷನ್ನಿನ 'ಮಾಹಿತಿಪತ್ರ' (ಬ್ರೋಷರ್)ವನ್ನು ಅನಾವರಣಗೊಳಿಸಿದರು.




### ೩. 'ಸ್ವಾಮಿ ಸುಂದಾನಂದಜಿ ತಪೋವನ' ಗಿಡ ನೆಡುವ ಕಾರ್ಯಕ್ರಮದ ಉದ್ಘಾಟನೆ (೧೪ ಸೆಪ್ಟೆಂಬರ್ ೨೦೨೫)

೨೦೨೫ರ ಸೆಪ್ಟೆಂಬರ್ ೧೪ರಂದು ಶ್ರೀಮತ್ ಸ್ವಾಮಿ ಸುಹಿತಾನಂದಜಿ ಮಹಾರಾಜರವರು '**ಸ್ವಾಮಿ ಸುಂದಾನಂದಜಿ ತಪೋವನ**' ಗಿಡಗಳನ್ನು ನೆಡುವ ಕಾರ್ಯಕ್ರಮವನ್ನು ಉದ್ಘಾಟಿಸಿದರು, ಇದು ಮಂಗಳೂರು ರಾಮಕೃಷ್ಣ ಮಠದಲ್ಲಿ ನಡೆಯಿತು. ಮಂಗಳೂರು ರಾಮಕೃಷ್ಣ ಮಿಷನ್ನಿನ ೭೫ ವರ್ಷದ ಸ್ಮರಣಾರ್ಥವಾಗಿ, ಆಶ್ರಮದ ಆವರಣದಲ್ಲಿ ೭೫ ಫಲವೃಕ್ಷ ಸಸಿಗಳನ್ನು ನೆಡಲಾಯಿತು. ಇದನ್ನು ಅಭಿವೃದ್ಧಿ, ಸೇವೆ ಮತ್ತು ಪ್ರಕೃತಿಯ ಪಾವಿತ್ರ್ಯದ ಸಂಕೇತವಾಗಿ ಆಯೋಜಿಸಲಾಯಿತು.


Managing Editor : Swami Muktidananda Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020